# ಚದುರಂಗ



‘ನೀವು ಏನು ಹೇಳುತ್ತಿದ್ದೀರಾ ಅಂತ ನಿಮಗೆ ಜ್ಞಾನ ಇದೆಯಾ ರಾಕೇಶ್?... ಇಲ್ಲಿ ಸತ್ತು ಬಿದ್ದಿರುವ ವ್ಯಕ್ತಿ, ಈಗ ಐದು ನಿಮಿಷದ ಕೆಳಗಡೆ ನಿಮ್ಮ ಕಣ್ಣೆದುರೇ ಆತ್ಮಹತ್ಯೆ ಮಾಡಿಕೊಂಡರಾ?...’

ಇನ್‌ಸ್ಪೆಕ್ಟರ್ ನಾಗೇಶ್ ತನ್ನ ಮುಂದೆ ಮಂಕಾಗಿ ಕುಳಿತಿದ್ದವನನ್ನು ಪ್ರಶ್ನಿಸಿದ. ಭಯದಿಂದ ಅವನ ಮುಖ ಬಾಡಿತ್ತು. ಇಡೀ ಮೈ ಬೆವರಿನಿಂದ ತೊಯ್ದಿತ್ತು. ನೋಡಲು ಸುಂದರವಾಗಿರುವ ಅವನನ್ನು ಆ ವಾತಾವರಣ, ಸುತ್ತ ಮುತ್ತಲಿನ ಪೊಲೀಸರು, ಅಲ್ಲಿಯೇ ಬಿದ್ದಿದ್ದ ರಕ್ತಸಿಕ್ತ ಶವ– ಎಲ್ಲವೂ ಭಯಭೀತನನ್ನಾಗಿ ಮಾಡಿತ್ತು. ಅದೆಲ್ಲದರ ಮಧ್ಯೆ ಅವನನ್ನು ಕೊರೆಯುತ್ತಿದ್ದ ಪ್ರಶ್ನೆ ಒಂದೇ...

‘ಐದು ನಿಮಿಷದ ಹಿಂದೆ ಆದ ಈ ಸಾವಿನ ಬಗ್ಗೆ ಪೊಲೀಸರಿಗೆ ಹೇಗೆ ತಿಳಿಯಿತು... ಇಷ್ಟು ಬೇಗ ಅವರು ಇಲ್ಲಿಗೆ ಬರಲು ಹೇಗೆ ಸಾಧ್ಯವಾಯಿತು?...’

‘ಸರ್, ನಿಮಗೆ ಇಲ್ಲಿ ಒಂದು ಸಾವು ಆಗಿದೆ ಎಂದು ಹೇಗೆ ತಿಳಿಯಿತು?’